ಹೊಸ ಪ್ರವೇಶಿಕರಿಗೆ 'ಆದಿಪುರಾಣ'ವನ್ನು ತುಂಬ ಸಮರ್ಥವಾಗಿ ಸಂಗ್ರಹಿಸಿ ಕೊಟ್ಟಿರುತ್ತಾರೆ. ವಿಶೇಷ ಅಂದರೆ 124 ಪುಟಗಳ ಈ ಸಂಗ್ರಹಕ್ಕೆ ಸಂಪಾದಕರು 90 ಪುಟಗಳ ದೀರ್ಘ ಮುನ್ನುಡಿ ಬರೆದಿದ್ದಾರೆ. 'ಆದಿಪುರಾಣ'ದ ಹದಿನಾರು ಆಶ್ವಾಸಗಳ ದೀರ್ಘ ಕಾವ್ಯವನ್ನು ಅತಿ ಕಿರಿದು ಮಾಡಿಕೊಟ್ಟಿರುವ ಈ ಸಂಗ್ರಹದಲ್ಲಿ 'ಮನುಷ್ಯ ಜಾತಿ...' ಪದ್ಯವೂ ಸೇರಿದೆ. ಆದರೆ ಗುಂಡಪ್ಪನವರು ಆ ಪದ್ಯದ ಮಹತ್ವವನ್ನು ವಿವರಿಸಲು ಹೋಗಿಲ್ಲ.

ಇನ್ನು ಬೆಂಗಳೂರು, ಮೈಸೂರು ವಿಶ್ವ ವಿದ್ಯಾನಿಲಯಗಳ ಸಾಹಿತ್ಯ ಚರಿತ್ರೆಗಳಲ್ಲಿ ವಿದ್ವಾಂಸರು ಅಲ್ಲಲ್ಲಿ ಪಂಪನ ಕವಿತಾಶಕ್ತಿಯನ್ನು ಚರ್ಚಿಸುತ್ತ ಹೋಗುವಲ್ಲಿ, ನಾವೆಲ್ಲ ಪ್ರಚುರಪಡಿಸುತ್ತಿರುವ ವಾಕ್ಯವನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಮೈಸೂರು ವಿಶ್ವವಿದ್ಯಾನಿಲಯ 1974ರಲ್ಲಿ ಪ್ರಕಟಿಸಿರುವ ಸಾಹಿತ್ಯ ಚರಿತ್ರೆಯಲ್ಲಿ ಪಂಪನನ್ನು ಕುರಿತಾಗಿ 83 ಪುಟಗಳ ದೀರ್ಘ ಚರ್ಚೆಯಿದ್ದು ಅಲ್ಲಿ ಎರಡೂ ಕೃತಿಗಳ ಮಾಹಿತಿ ಇದೆ. ಮೂವರು ವಿದ್ವಾಂಸರು ಬರೆದ ಲೇಖನಗಳಲ್ಲಿ ಎಲ್ಲಿಯೂ ಪಂಪನ ಲೋಕ ಉದಾರತೆಯನ್ನು ಹೇಳುವ 'ಮನುಷ್ಯ ಜಾತಿ ಒಂದೆನ್ನುವ' ವಾಕ್ಯವನ್ನು ಪ್ರಸ್ತಾಪಿಸುವುದಿಲ್ಲ.

ದಶಕಗಳಿಂದ ವಿದ್ವಾಂಸರ ಕಣ್ಣಿಗೆ ಬೀಳದೆ ಈಗ ಅಲ್ಲಲ್ಲಿಯ ಸಭೆ- ಸಮಾರಂಭಗಳಲ್ಲಿ, ವಿಶ್ವಮಾನವತ್ವ, ಸಮಾನತೆ, ಭ್ರಾತೃತ್ವ ಇವುಗಳನ್ನು ಉಚ್ಚರಿಸುವಲ್ಲಿ ಅದಕ್ಕೆ ಇಂಬಾಗಿ ಪಂಪನ ಜಾತಿ ವಿಲಂಘನ ವಾಕ್ಯ ತೀವ್ರ ಥರದಲ್ಲಿ ಕಣ್ಣಿಗೆ ಬಿದ್ದದ್ದು ಹೇಗೆ ಎಂಬುದನ್ನು ಗಮನಿಸಬೇಕಾಗಿದೆ. ನಮಗೆಲ್ಲ ತಿಳಿದಿರುವಂತೆ ಪಂಪ 'ಆದಿಪುರಾಣ' ರಚನೆಗೆ ಅನುಸರಿಸಿರುವ ಮೂಲಕೃತಿ ಜಿನಸೇನಾಚಾರ್ಯರ ಪೂರ್ವಪುರಾಣ. ಇದರ ಮೂವತ್ತೆಂಟನೇ ಪರ್ವದ 45ನೇ ಶ್ಲೋಕ

**ಮನುಷ್ಯ ಜಾತಿರೇಕೈವ**
**ಜಾತಿ ನಾಮೋದಯೋದ್ಭವ|**
**ವೃತ್ತಿಭೇದಾಹಿತಾದ್ಭೇದ**
**ಚಾತುರ್ವಿಧ್ಯಮಿಹಾಶ್ನುತೇ||**

ಎಂದಿದ್ದು ಇದರ ಅರ್ಥವನ್ನೂ ಅಲ್ಲೇ ಕೊಡಲಾಗಿದೆ. ಜಾತಿ ಎಂಬ ನಾಮಕರ್ಮದ ಉದಯದಿಂದುಂಟಾದ ಮನುಷ್ಯ ಜಾತಿಯು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ರೂಪದಿಂದ ನಾಲ್ಕು ಭೇದವನ್ನು ಹೊಂದುತ್ತದೆ ಎಂದು ಹೇಳಲಾಗಿದೆ. ಹೀಗೆಯೇ ಮುಂದಿನ ಶ್ಲೋಕದ ಅರ್ಥವೂ ವ್ರತದ ಮತ್ತು ಸಂಸ್ಕಾರದ ದೆಸೆಯಿಂದ ಬ್ರಾಹ್ಮಣರೆನಿಸುವರು, ಶಸ್ತ್ರಗಳನ್ನು ಧರಿಸುವುದರಿಂದ ಕ್ಷತ್ರಿಯರೆನಿಸುವರು. ನ್ಯಾಯವಾದ ದ್ರವ್ಯಾರ್ಜನೆಯಿಂದ ವೈಶ್ಯರೆನಿಸುವರು. ನೀಚವೃತ್ತಿಯನ್ನು ಆಶ್ರಯಿಸುವುದರ ದೆಸೆಯಿಂದ ಶೂದ್ರರೆನಿಸುವರು. ಈ ಪುರಾಣಕೃತಿಯ ಮುಂದಿನ ಶ್ಲೋಕಗಳನ್ನು ಗಮನಿಸುತ್ತ ಹೋದರೆ ಬ್ರಾಹ್ಮಣರಲ್ಲಿಯೇ ಎರಡು ಗುಂಪುಗಳನ್ನು ವಿಭಾಗಿಸಿದಂತೆ ಕಾಣುತ್ತದೆ. ಅಂದರೆ ಷಟ್ಕರ್ಮಗಳನ್ನು ಅನುಸರಿಸುವವರು ಮಾತ್ರ ದ್ವಿಜಶ್ರೇಷ್ಠರು, ಇವರು ಎಲ್ಲರಿಗೂ ಮಾರ್ಗದರ್ಶಕ ಆದರ್ಶ ಪುರುಷರು. ಇದನ್ನು ಅನುಸರಿಸದವರು ಕೇವಲ ಬ್ರಾಹ್ಮಣರು. ಇತರೆ ಸಮೂಹವೆಲ್ಲ ಬೇರೆಬೇರೆ ವೃತ್ತಿಗಳನ್ನು ಆಶ್ರಯಿಸಿ ಬದುಕುವ ಸಮೂಹ ಅಥವಾ ಜಾತಿಯವರು ಎಂದು ಹೇಳಲಾಗಿದೆ. ಪಂಪ ಇದನ್ನು ಅನುಸರಿಸಿಯೇ 'ಆದಿಪುರಾಣ'ದಲ್ಲಿ ಆ ಪ್ರಸಂಗ ಪದ್ಯ ಸೇರಿಸಿರುವುದರಿಂದ ಅದೇ ಅರ್ಥ ಬರಬೇಕಲ್ಲವೇ?

'ಆದಿಪುರಾಣ' ಗದ್ಯಾನುವಾದ ಮಾಡಿರುವ ಮತ್ತು ಈ ಹಿಂದೆಯೇ ಹೇಳಿದಂತೆ ಈ ಪದ್ಯವನ್ನು ಪ್ರಸ್ತಾವನೆಯಲ್ಲಿ ಉದ್ಧರಿಸದೇ ಇರುವ ಸಂಪಾದಕ ಲಕ್ಷ್ಮೀನರಸಿಂಹ ಶಾಸ್ತ್ರಿಯವರು ಹದಿನೈದನೆಯ ಆಶ್ವಾಸದಲ್ಲಿ ಪೂರ್ವಪುರಾಣ ಶ್ಲೋಕ ಮಾದರಿಯಂತೆಯೇ ಅನುವಾದ ಮಾಡಿರುತ್ತಾರೆ. ಹೀಗೆ ಪೂರ್ವಪುರಾಣದಂತೆ, ಪಂಪನ 'ಆದಿ ಪುರಾಣ'ದಂತೆ ಬ್ರಾಹ್ಮಣರಲ್ಲಿಯೇ ಎರಡು ಗುಂಪು ಅನ್ನುವುದಾದರೆ ಉಳಿದ ಸಮೂಹವೆಲ್ಲ ಒಂದೇ ಎಂಬ ಅರ್ಥ ಬರುತ್ತದೆಯೇ? ಅವೂ ಕೂಡ ಅವರವರ ಕರ್ಮಕ್ಕನುಸಾರವಾಗಿ ಮನುಷ್ಯ ಜಾತಿಗಳಾಗಿರುತ್ತವೆ ಎಂದಾಯಿತು. ಪಂಪನ 'ಆದಿಪುರಾಣ'ದ

**ಆರುಮ್ ವೃತ್ತಿಗಳನಿವಂ ಮೀರದರಲ್ಲರ್**
**ದ್ವಿಜನ್ಮರೀ ವೃತ್ತಿಗಳಿಂ|**
**ಬೇರಾದರ್ ದ್ವಿಜರುಂತೇಮ್ ಬೇರುಂಟೆ ಮನುಷ್ಯ**
**ಜಾತಿ ತಾನೊಂದೆ ವಲಂ||**